# ಅಂಗನವಾಡಿಗಳಿಗೆ ಹೈಟೆಕ್ ಸ್ಪರ್ಶ: ಸಚಿವೆ

ಉಡುಪಿ: ಮಕ್ಕಳಿಗೆ ಉತ್ತಮ ವಾತಾವರಣ ನಿರ್ಮಿಸುವುದಕ್ಕಾಗಿ ಈಗಿರುವ ಸರಕಾರಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ ಹೈಟೆಕ್ ಮಾದರಿಯಲ್ಲಿ ನಿರ್ಮಾಣ ಮಾಡಲು ಚಿಂತನೆ ನಡೆಸಲಾಗಿದೆ. ಪ್ರಾಯೋಗಿಕವಾಗಿ ಕಾರವಾರದಲ್ಲಿ ಇದನ್ನು ಆರಂಭಿಸಲಾಗುತ್ತಿದ್ದು, ಬಳಿಕ ಉಡುಪಿ ಜಿಲ್ಲೆಗೆ ವಿಸ್ತರಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

ಕಾರವಾರದಲ್ಲಿ ಪ್ರಾಯೋಗಿಕ ಆರಂಭ

ನಗರದಲ್ಲಿ ಗುರುವಾರ ಪತ್ರಕರ್ತರ ಜತೆ ಮಾತನಾಡಿ, ರಾಜ್ಯದಲ್ಲಿ ಅಂಗನವಾಡಿಗಳಿಗೆ ಕಟ್ಟಡದ ಸಮಸ್ಯೆ ಇದೆ. ಹಳೆಯ ಕಟ್ಟಡಗಳನ್ನು ಮೇಲ್ದರ್ಜೆಗೇರಿಸಿ, ಮೂಲ ಸೌಕರ್ಯ ಒದಗಿಸಲಾಗುವುದು. ಆಟದ ಮೈದಾನ, ಡಿಜಿಟಲ್ ಪುಸ್ತಕಗಳು ಇತ್ಯಾದಿ ಆಧುನಿಕ ಸಲಕರಣೆಗಳನ್ನು ಪೂರೈಸಲಾಗುವುದು. ಈ ಸಂಬಂಧ ಸರ್ವೇ ನಡೆಸಿ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ವಿಭಾಗಗಳಲ್ಲಿ ಖಾಲಿಯಿದ್ದ ಹುದ್ದೆಗಳನ್ನು ಭಡ್ತಿ, ನೇಮಕಾತಿ ಮೂಲಕ ತುಂಬಲಾಗಿದೆ. ಇಲಾಖೆಯಲ್ಲಿ ಶೇ.60ರಷ್ಟು ಹುದ್ದೆಗಳು ಈಗ ಭರ್ತಿಗೊಂಡಿವೆ. ಮಹಿಳೆಯರ, ಮಕ್ಕಳ, ಹಿರಿಯ ನಾಗರಿಕರ, ಅಶಕ್ತರ ಕಲ್ಯಾಣಕ್ಕೆ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ಏಳು ತರಹದ ವಿಕಲಚೇತನರೆಂದು ಈ ಹಿಂದೆ ಸರಕಾರ ಗುರುತಿಸಿತ್ತು. ಪ್ರಧಾನಿ ಈ ಪಟ್ಟಿಗೆ ಇನ್ನಷ್ಟು ಹೆಸರು ಸೇರಿಸಿ, ಅದನ್ನು ವಿಸ್ತರಿಸಿ 27 ತರಹದ ಅಂಗವಿಕಲರೆಂದು ಗುರುತಿಸಿ ಮಾರ್ಪಾಟುಗೊಳಿಸಿದ್ದಾರೆ. ಅಶಕ್ತರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಈ ನಿರ್ಧಾರ ಕೈಗೊಂಡಿದ್ದಾರೆ. ಕಟ್ಟಕಡೆಯ ವ್ಯಕ್ತಿಗೂ ಸೌಕರ್ಯಗಳನ್ನು ತಲುಪಿಸುವ ಪ್ರಯತ್ನ ನಡೆಸಲಾಗುತ್ತಿದೆ ಎಂದರು. ಹಿರಿಯ ನಾಗರಿಕರಿಗೆ ವಾಕಿಂಗ್ ಸ್ಟಿಕ್, ಹಲ್ಲು ಸೆಟ್ ಇತ್ಯಾದಿ ಸಲಕರಣೆ ವಿತರಿಸಲಾಗುತ್ತಿದೆ. ಹಿರಿಯ ನಾಗರಿಕರಿಗೆ ಗೌರವದಿಂದ ಬದುಕು ಸಾಗಿಸಲು ಅನುಕೂಲ ಮಾಡಿಕೊಡಲಾಗುತ್ತಿದೆ ಎಂದರು.

## ಮಾತೃಪೂರ್ಣ ಯೋಜನೆ ಕುರಿತು ಸಿಎಂ ಜತೆ ಚರ್ಚೆ

ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ಪೂರೈಸುವ ಮಹತ್ವಾಕಾಂಕ್ಷೆಯ 'ಮಾತೃಪೂರ್ಣ' ಯೋಜನೆ



ಅವೈಜ್ಞಾನಿಕ ಎಂಬುದು ಸರಕಾರಕ್ಕೆ ಮನದಟ್ಟಾಗಿದೆ. ಗರ್ಭಿಣಿಯರು ಮಧ್ಯಾಹ್ನದ ಹೊತ್ತು ಅಂಗನವಾಡಿಗಳಿಗೆ ಬರುವುದನ್ನು ತಪ್ಪಿಸಲು ಅವರ ಮನೆಗೆ ತೆರಳಿ ಪೌಷ್ಟಿಕ ಹಾಲು, ಪೌಡರ್ ವಿತರಿಸುವ ವ್ಯವಸ್ಥೆಯನ್ನು ಜಾರಿಗೆ ತರುವುದು ಸೂಕ್ತ. ಇದರ ಜಾರಿ ವಿಧಾನ ಕುರಿತು ಮುಖ್ಯಮಂತ್ರಿಗಳ ಜತೆ ಚರ್ಚಿಸಿ ಅಂತಿಮ ನಿರ್ಧಾರಕ್ಕೆ ಬರಲಾಗುವುದು. ಅಂಗನವಾಡಿ ಸಿಬ್ಬಂದಿಗೆ ಗೌರವಧನ ಹೆಚ್ಚಳ ಮತ್ತು ತಿಂಗಳ 10ರೊಳಗೆ ವೇತನ ಪಾವತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.